## ಆಚಾರ್ಯರ ಮನೆಗೆ ಮರುಜೀವ

‘ಆಚಾರ್ಯರ ಮನೆಗೆ ಮರುಜೀವ’ (ನಿರಂಜನ ವಾನಳ್ಳಿ, ಡಿ. 23) ಲೇಖನ ಓದಿ ಖುಷಿಯಾಯಿತು. ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯ ಅವರ ಬೀಳುವ ಹಂತದಲ್ಲಿದ್ದ ಚಾರಿತ್ರಿಕ ಮನೆಗೆ ಮರುಜೀವ ನೀಡಿದ ಕಲಾವಿದರೆಲ್ಲರೂ ಅಭಿನಂದನಾರ್ಹರು.

—ಪಿ. ಜಯವಂತ ಪೈ, ಕುಂದಾಪುರ

## ಮುಟ್ಟಿದರೆ ಮಸಿ!

‘ಮುಟ್ಟಿದರೆ ಮಸಿ’ (ಜಿ. ನಾಗೇಂದ್ರ ಕಾವೂರು, ಡಿ. 23) ಲೇಖನ ಚೆನ್ನಾಗಿತ್ತು. ಮಸಿವಾಳ ಮರದ ಬಗೆಗಿನ ಚಿಕ್ಕ ಚೊಕ್ಕ ಲೇಖನ. ಬೇಟೆಗಾರರ ರಕ್ಷಾ ಕವಚದ ಚಿತ್ತಾರವಾಗಿ, ಅಂದದ ಪೀಠೋಪಕರಣಗಳಾಗಿ, ಅಪಾರ ಔಷಧೀಯ ಗುಣ ಹೊಂದಿರುವ ಆಯುರ್ವೇದ ಔಷಧವಾಗಿ ಬಹೂಪಯೋಗಿಯಾಗಿದೆ.

—ಸುಮನಾ

ಪ್ರಕೃತಿಯಲ್ಲಿ ವಿಶಿಷ್ಟ ಮರವಾಗಿ ಮಸಿವಾಳ ತನ್ನ ವಿಭಿನ್ನ ಗುಣಲಕ್ಷಣದಿಂದ ಮುಟ್ಟಿದರೆ ಕೈ ಮಸಿಯಾಗುವುದರ ಕುರಿತು ಓದಿ ಆಶ್ಚರ್ಯವಾಯ್ತು. ಇಂತಹ ಮರ ಹತ್ತಿರದ ಸಂಡೂರು ಅರಣ್ಯದಲ್ಲಿರುವುದು ತಿಳಿದು ಖುಷಿ ಆಯಿತು. ಪೀಠೋಪಕರಣ ಮಾಡಲು ಅದನ್ನು ಹೇಗೆ ಉಪಯೋಗಿಸುತ್ತಾರೆ? ಆಗ ಅದರ ಮಸಿಯಿಂದ ಕೈಗಳು ಮಸಿಯಾಗುವುದಿಲ್ಲವೇ?

—ಅನುರಾಧ ಟಿ., ದಾವಣಗೆರೆ

## ವೈರಸ್ ಹೆಸರಿನಲ್ಲಿ ಆತಂಕ ಸೃಷ್ಟಿ

‘ವೈರಸ್ ಹೆಸರಿನಲ್ಲಿ ಆತಂಕ ಸೃಷ್ಟಿ’ (ರಘುನಾಥ್ ಚ.ಹ. ಡಿ. 23) ‘ನಿಮ್ಮೊಡನೆ’ ಲೇಖನ ಸಮಯೋಚಿತವಾಗಿತ್ತು. ವಾರ್ತಾ ವಾಚಕರು ಯಾವುದೇ ಘಟನೆಯ ಸತ್ಯಾಸತ್ಯತೆಯ ಅರಿವಿನೊಂದಿಗೆ ವಸ್ತುನಿಷ್ಠವಾಗಿ ಸುದ್ದಿ ನಿರೂಪಿಸಬೇಕೇ ಹೊರತು, ಅವರ ನಟನಾ ಕೌಶಲ್ಯವನ್ನು ತೋರಿಸುವ ಬಾಲಿಶತನವನ್ನಲ್ಲ. ಭೀಭತ್ಸ ಹಿನ್ನೆಲೆ ಸಂಗೀತದೊಂದಿಗೆ ಎಡ–ಬಲ ಓಲಾಡುತ್ತ ಉನ್ಮತ್ತತೆಯಿಂದ, ಸಿನಿಮಾದ ಖಳನಾಯಕರಂತೆ ಸಾಮಾನ್ಯ ಸುದ್ದಿಯನ್ನೂ ಭೀಕರವಾಗಿ ಬಿತ್ತರಿಸುವ ಇವರು ಸಾಮಾಜಿಕ ಜವಾಬ್ದಾರಿಯನ್ನು ಮರೆತರೇಕೆ? ಇಂಥ ಅತಿರೇಕದ ವರ್ತನೆಗಳಿಂದ ಬೇಸತ್ತು ನಾವು ಈಗೆರಡು ವರ್ಷಗಳಿಂದ ಸುದ್ದಿಚಾನಲ್‌ಗಳನ್ನು ವೀಕ್ಷಿಸುವುದನ್ನೇ ನಿಲ್ಲಿಸಿದ್ದೇವೆ.

—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

## ಕೋಳನ್‌ಕಲ್ ಗಣಪತಿ

‘ಕೋಳನ್‌ಕಲ್ ಗಣಪತಿ’ (ಬಿ. ಸತ್ಯನಾರಾರಾಯಣ ಅರಸ ಡಿ. 23) ‘ನಿಮ್ಮ ಪುಟ’ ವಿಭಾಗದ ಬರಹ ಹಿಡಿಸಿತು. ಹಾಗೆಯೇ ಮುಂದೆ ಹೋದರೆ ಹೊಸದಾಗಿ ಕಟ್ಟಿದ, ವೀರೇಂದ್ರ ಹೆಗ್ಗಡೆ ಅವರು ಉದ್ಘಾಟಿಸಿದ ಕಕ್ಕುಂಜೆ ಶ್ರೀ ಮಹಾಗಣಪತಿ ದೇವಸ್ಥಾನ ಮನಸೂರೆಗೊಳ್ಳುತ್ತದೆ.

—ಲಕ್ಷ್ಮಣ್ ರಾವ್ ಎಂ. ಎಲ್. ದಾವಣಗೆರೆ



## ಹಿಮ ಪರ್ವತಗಳ ಹಿತ್ತಲಿನಲ್ಲಿ

‘ಹಿಮ ಪರ್ವತಗಳ ಹಿತ್ತಲಿನಲ್ಲಿ’ (ನರಸಿಂಹಸ್ವಾಮಿ ಎನ್., ಡಿ. 23) ಲೇಖನವನ್ನು ಓದಿ 30 ವರ್ಷಗಳ ಹಿಂದೆ ನಾವು ಮಾಡಿದ ಶಿಮ್ಲಾ ಪ್ರವಾಸದ ನೆನಪು ಮರುಕಳಿಸಿತು. ಆ ಗದಗುಟ್ಟಿಸುವ ಚಳಿಯಲ್ಲಿ ಹಿಮದ ಮನೋಹರ ನೋಟ, ಬಿಸಿ ಜಿಲೇಬಿಯ ಸೇವನೆ, ಯಾಕ್ ಮೇಲಿನ ಸವಾರಿ ಮರೆಯಲಾಗದ ಅನುಭವಗಳು.

—ವಿಜಯಾ ಪ್ರಸಾದ್, ಬೆಂಗಳೂರು

## ಮಾಡರ್ನ್ ಮಹಿಳೆ

‘ಮಾಡರ್ನ್ ಮಹಿಳೆ’ (ಸಂಧ್ಯಾರಾಣಿ ಮತ್ತು ಕಾವ್ಯಾ ಕಡಮೆ, ಅ. 28) ಮುಖಪುಟ ಲೇಖನ ಚೆನ್ನಾಗಿತ್ತು. ಲೇಖನದ ಹೆಚ್ಚಿನ ಭಾಗಗಳು ನನ್ನ ವಿಚಾರಗಳಿಗೆ ತಾಳೆಯಾಗುತ್ತಿವೆ. ನನಗನಿಸುವಂತೆ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವತಂತ್ರರಾಗುವುದರಜೊತೆಗೆಮಾನಸಿಕವಾಗಿಯೂ ಸ್ವತಂತ್ರರಾಗಬೇಕು. ಬಹುತೇಕ ಮಹಿಳೆಯರು ಪುರುಷಪ್ರಧಾನ ಸಮಾಜದ ತತ್ವಗಳಿಗೆ ಎಷ್ಟು ಅಂಟಿಕೊಂಡಿದ್ದಾರೆಂದರೆ ಆ ಸಿದ್ಧಾಂತಗಳನ್ನು ಒಪ್ಪದ ಮಹಿಳೆಯರನ್ನು ಅವರೇ ಖಂಡಿಸುತ್ತಾರೆ. ಮುಂಬರುವ ದಿನಗಳಲ್ಲಿ ಇದು ಬದಲಾಗಲಿ ಎಂದು ಆಶಿಸುತ್ತೇನೆ.

—ಕಾಂತಿ ಪಿ.

## ಎರಡು ನದಿಗಳ ಕಥೆ

‘ಎರಡು ನದಿಗಳ ಕಥೆ’ (ಮಲ್ಲಿಕಾರ್ಜುನ ಹೊಸಪಾಳ್ಯ ಮತ್ತು ಪ್ರಶಾಂತ ಕುರ್ಕೆ, ಡಿ. 16) ಲೇಖನಗಳು ಚೆನ್ನಾಗಿದ್ದವು. 10 ವರ್ಷಗಳ ಹಿಂದೆ ನಾಟಕ ಕಾರ್ಯಕ್ರಮ ಕೊಡಲು ವಿಧುರಾಶ್ವಥಕ್ಕೆ ಹೋದಾಗ ಬರೀ ಒಣಗಿದ ಪಿನಾಕಿನಿ ನದಿ ನೋಡಿ ಬೇಸರವಾಗಿತ್ತು. ಆದರೆ ಇತ್ತೀಚಿನ ಮಳೆಯಿಂದ ಬೆಳೆ ಹಾನಿ ಹಾಗೆಯೇ ಬದುಕು ಕಷ್ಟವಾದರೂ ಮುಂದಿನ ಬದುಕಿಗಾಗಿಯೋ ಎಂಬಂತೆ ಪಿನಾಕಿನಿ ನದಿ ತುಂಬಿ ಹರಿದಿದೆ. ಇಷ್ಟು ದಿನ ಮನುಷ್ಯ ಅಕ್ರಮ ಎಸಗಿದಂತೆ ಮುಂದೆ ಹಾಗೆ ಆಗದಂತೆ ನದಿಯ ಜಲಮೂಲವನ್ನು ಉಳಿಸಬೇಕಾಗಿದೆ.

—ಫ್ಲೋರಾ ಅಚ್ಯುತ್, ಕೆ.ಜಿ.ಎಫ್.

# ಮಬ್ಬು ತಬ್ಬಿಬ್ಬು

‘2021 ಚಂದನವನ; ಮಬ್ಬು–ತಬ್ಬಿಬ್ಬು’ (ಪದ್ಮನಾಭ ಭಟ್, ಡಿ. 23) ಲೇಖನದ ಪಕ್ಷಿನೋಟ ಮನ ಸೆಳೆಯಿತು. ಕೊರೊನಾ ಕರಿನೆರಳಲ್ಲಿ ನೆಲಕಚ್ಚಿದ ಹಲವಾರು ಉದ್ಯಮಗಳಲ್ಲಿ ಚಿತ್ರರಂಗವೂ ಒಂದು. ಇಂತಹ ಸನ್ನಿವೇಶದಲ್ಲಿ ಚಿತ್ರರಂಗ ಉತ್ತಮ ಕಥೆಗಳುಳ್ಳ ಸದಭಿರುಚಿಯ ಚಿತ್ರವನ್ನು ಮಾಡುವುದರೊಂದಿಗೆ ಅನುಭವಿ ನಿರ್ದೇಶಕರೊಡಗೂಡಿ ಚಿತ್ರ ನಿರ್ಮಿಸಿ ಜನರ ಮುಂದೆ ಇಟ್ಟರೆ ಸರಿ, ಇಲ್ಲದಿದ್ದರೆ ಸಂಪೂರ್ಣವಾಗಿ ಚಿತ್ರರಂಗ ಕುಸಿಯುವುದರಲ್ಲಿ ಅನುಮಾನವಿಲ್ಲ.

—ಬೆಂ. ಮು. ಮಾರುತಿ, ಬೆಂಗಳೂರು

ಲೇಖನ ಸಮಯೋಚಿತವಾದುದು. ಕೊರೊನಾ ಅಲೆ ದೇಶದಾದ್ಯಂತ ಅಪ್ಪಳಿಸಿ ಇಡೀ ಸಾರ್ವಜನಿಕ ಜೀವನ ತಲ್ಲಣಗೊಂಡಿದೆ. ಒಂದೆಡೆ ಕೊರೊನಾ, ಮತ್ತೊಂದೆಡೆ ಬೆಲೆ ಏರಿಕೆ, ಇವುಗಳ ಮಧ್ಯೆ ಚಿತ್ರರಂಗಕ್ಕೆ ಆಧಾರದಂತಿದ್ದ ಪುನೀತ್ ರಾಜಕುಮಾರ್ ಅವರ ಅಕಾಲಿಕ ಮರಣ ಚಿತ್ರರಂಗದ ಕೆಲವು ಗಣ್ಯರ ಮರಣ ಎಲ್ಲವೂ ಚಿತ್ರರಂಗವನ್ನು ಇನ್ನಷ್ಟು ಕುಸಿಯುವಂತೆ ಮಾಡಿದೆ.

—ಎಂ. ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ



ಕೊರೊನಾ ಪಿಡುಗಿನ ಹೊಡೆತಕ್ಕೆ ತತ್ತರಿಸಿ ಸೊರಗಿದ ಚಂದನವನದ ಅವಲೋಕನ ಉತ್ತಮವಾಗಿ ಮೂಡಿಬಂದಿದೆ. ‘ಹೋಪ್’ ಚಿತ್ರದಿಂದ ಪ್ರಾರಂಭವಾದ ವರ್ಷ ಕಡೆಯಲ್ಲಿ ಒಟ್ಟಾರೆ ಫ್ಲಾಪ್ ಆದದ್ದು ವಿಷಾದನೀಯ ಹಾಗೂ ಸಿನಿಪ್ರಿಯರಿಗೆ ನಿರಾಸೆ.

—ಎಂ. ಆರ್. ಚಂದ್ರಶೇಖರ್, ಬೆಂಗಳೂರು

ವರ್ಷದ ರೌಂಡಪ್ ಚೆನ್ನಾಗಿ ಮೂಡಿಬಂದಿದೆ. ಇದರ ಜೊತೆ ಗಮನಿಸಬೇಕಾದ ಇನ್ನೊಂದು ಸಂಗತಿ ಬೆಂಗಳೂರಿನ ಕೆ.ಜಿ. ರಸ್ತೆಯ ಪ್ರಮುಖ ಚಿತ್ರಮಂದಿರ ಸಂತೋಷ್, ನರ್ತಕಿ, ಮೇನಕಾ ಪ್ರದರ್ಶನ ನಿಲ್ಲಿಸಿರುವುದು. ಕನ್ನಡ ಚಿತ್ರರಂಗದ ಕಲಶಪ್ರಾಯದಂತೆ ಇದ್ದ ಈ ಟಾಕೀಸ್ ಬಂದ್ ಆದ ಕಾರಣ ಉಳಿದಿರುವ ತ್ರಿವೇಣಿ, ಅನುಪಮಾ ಮ್ಯೂಸಿಕಲ್ ಚೇರ್ ಹಾಗೆ ಆಗಿವೆ.

—ಶ್ರೀನಿವಾಸ ಉಪಾಧ್ಯ, ಉಡುಪಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in